ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಹಿರಿಯ ಮಾನ್ಯ ಸದಸ್ಯರಾದ ಜಾಲಪ್ಪನವರು ಒಂದು ಮಾತನ್ನು ಹೇಳಿದರು. ದುಡ್ಡಿಲ್ಲದಿದ್ದರೆ, ಇಲ್ಲ ಎಂದು ಹೇಳಬೇಕು, ಸುಳ್ಳು ಆಶ್ವಾಸನೆಗಳನ್ನು ಏತಕ್ಕೆ ಕೊಡಬೇಕೆಂದು ಹೇಳಿದರು. ಅವರ ಕಾಲದಲ್ಲಿ ಕೂಡ ಸಾಕಷ್ಟು ಹಣದ ಅಭಾವ ಇತ್ತು. ಆಗ ಅವರು ತಮ್ಮಲ್ಲಿ ಹಣ ಇಲ್ಲವೆಂದು ಹೇಳಿಕೊಂಡಿದ್ದರೆ? ನಮ್ಮಲ್ಲಿ ಹಣವಿಲ್ಲದ್ದರಿಂದ ಇಂಥಿಂಥ ಯೋಜನೆಗಳನ್ನು ಕಾರ್ಯಗತಾ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿಕೊಂಡಿದ್ದರೆ?

ಶ್ರೀ ಹೆಚ್. ವಿಶ್ವನಾಥಯ್ಯ : ತಾವು ಹಿಂದೆ ಚರ್ಚೆ ಮಾಡುವಾಗಲೆಲ್ಲಾ ಈ ಮಾತನ್ನು ಹೇಳಿದ್ದೀರಿ.

ಶ್ರೀಮತಿ ಮೋಟಮ್ಮ : ನಾವು ಬಸವಣ್ಣನವರನ್ನು ನೆನೆಸಿಕೊಳ್ಳಬೇಕಾಗುತ್ತದೆ. ಇದಿರ ಹಳಿಯಲು ಬೇಡ, ತನ್ನ ಬಣ್ಣಿಸಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ ಎಂಬುದನ್ನು ಅವರು ನೆನಪು ಮಾಡಿಕೊಳ್ಳಬೇಕು. ನಾವು ಸರಿ, ನೀವು ಸರಿ ಎಂದು ಹೇಳುವುದು ಸರಿಯಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಕಾಲದಲ್ಲಿ ಏನು ಬೋರ್ವೆಲ್ಲುಗಳನ್ನು ಮಾಡಿದ್ದೇವೆ ಅವುಗಳಲ್ಲಿ ಕೆಟ್ಟು ಹೋಗಿರುವುಗಳನ್ನು ಇವರು ಸರಿಯಾಗಿ ರಿಪೇರಿ ಮಾಡಿದ್ದಾರೆಯೇ ಎಂದು ಕೇಳಬಯಸುತ್ತೇನೆ. ತಮಗೆ ಹೇಳುವುದಾದರೆ, ಈ ವಿಚಾರದಲ್ಲಿ ನಾನು ಛಾಲೆಂಜ್ ತೆಗೆದುಕೊಳ್ಳುತ್ತೇನೆ. ನಾನು ಜವಾಬ್ದಾರಿಯುತವಾಗಿ ಮಾತನಾಡುತ್ತಿದ್ದೇನೆ. ನಾನು ಇಲ್ಲಿಗೆ ಸುಮ್ಮನೆ ಬಂದು ಗಾಸಿಪ್ ಹೊಡೆಯುತ್ತಿಲ್ಲ. ದಯವಿಟ್ಟು ಕೇಳಿ. ನಾನು ಕಳೆದ 8-10 ದಿನದ ಹಿಂದೆ ನನ್ನ ತಾಲ್ಲೂಕಿಗೆ ಹೋಗಿದ್ದಾಗ ನನಗೆ ಕಂಪ್ಲೇಂಟ್ಸ್ ಬಂತು. ಅಲ್ಲಿ 60 ಬೋರ್ವೆಲ್ಸ್ ಕೆಟ್ಟುಹೋಗಿವೆ ಎಂದು. ಏಕೆ ಎಂದು ಕೇಳಿದರೆ ಡೀಸೆಲ್ ಇಲ್ಲ ಎಂದು ಹೇಳಿದರು. ಜಿಲ್ಲಾಪರಿಷತ್ತಿನ ಇಂಜಿನಿಯರ್ರವರನ್ನು ಕರೆದು ಕೇಳಿದರೆ, ಅವರು ಏನು ಹೇಳಿದರೆಂಬುದನ್ನು ನಾನು ಈ ತುಂಬಿದ ಸದನದಲ್ಲಿ ಹೇಳುತ್ತಿದ್ದೇನೆ. ಡೀಸಲ್ ಬಿಲ್ ಪಾವತಿ ಮಾಡಿಲ್ಲ ಆದ್ದರಿಂದ ಅವರು ಡೀಸೆಲ್ ಕೊಡುತ್ತಿಲ್ಲ ಎಂದು ಹೇಳಿದರು. ಆಗ ನಾನು ಹೇಳಿದೆ, ನಾನೇ 4-5ಸಾವಿರ ರೂ. ಕೊಡುತ್ತೇನೆ, ನೀವು ಕೊಟ್ಟರೆ ಕೊಡಿ, ಇಲ್ಲದಿದ್ದರೆ ಬೇಡ ಮೊದಲು ಡೀಸೆಲ್ ತೆಗೆದುಕೊಂಡು ಹೋಗಿ ಕೆಲಸಮಾಡಿ ಎಂದು ಹೇಳಿ ಬೋರ್ವೆಲನ್ನು ರಿಪೇರಿ ಮಾಡಿಸಿ ಬಂದೆ. ಮಾರನೇ ದಿನ ನಾನು ಇಲ್ಲಿಗೆ ಬಂದು ಕಾರ್ಯದರ್ಶಿಯವರ ಜೊತೆ ಮಾತನಾಡಿದಾಗ ಚೀಫ್ ಸೆಕ್ರೆಟರಿಯವರು ಹೇಳಿದರು, ಏನೋ ವ್ಯತ್ಯಾಸವಾಗಿದೆ, ನಾನು ಇವತ್ತು ಹಣವನ್ನು ರಿಲೀಸ್ ಮಾಡುತ್ತೇನೆಂದು ಹೇಳಿದರು. 60 ಬೋರ್ವೆಲ್ಲುಗಳು ಏನು ಕೆಟ್ಟಿದ್ದುವು ಅವುಗಳನ್ನು ಮೊನ್ನೆ ತಾನೇ ರಿಪೇರಿಗೆ ತೆಗೆದುಕೊಂಡಿದ್ದಾರೆ. ಇದರಲ್ಲಿ ಏನು ಸುಳ್ಳಿದೆ?

ಶಾಸನ ರಚನಾ ಕಾರ್ಯಕಲಾಪಗಳು.

(ಎ) ವಿಧೇಯಕಗಳ ಮಂಡನೆ.

1994 ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ;

"1994ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ: "1994ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.';

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಸಂಸದೀಯ ಹಾಗೂ ಕಾನೂನು ಸಚಿವರು): ಮಾನ್ಯ ಅಧ್ಯಕ್ಷರೇ, ಈಗ ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆಯನ್ನು ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ತೆಗೆದುಕೊಂಡು ಮುಗಿಸಿಬಿಡೋಣ.

ಅಧ್ಯಕ್ಷರು : ಈಗ ತಾನೇ ಮಾನ್ಯ ವಿರೋಧ ಪಕ್ಷದ ನಾಯಕರು ನನ್ನ ಕೊಠಡಿಗೆ ಬಂದು ತಾವು ಇನ್ನೂ ಇದರ ಬಗ್ಗೆ ತಯಾರಿಲ್ಲ ಆದ್ದರಿಂದ ನಾಳೆ ತೆಗೆದುಕೊಳ್ಳೋಣ ಎಂದು ಹೇಳಿ ಹೋದರು.

ಶ್ರೀ ಪಿ.ಜಿ. ಆರ್. ಸಿಂಧ್ಯ : ಆಗಬಹುದು.

ಅಧ್ಯಕ್ಷರು :ಈಗ ಉಚ್ಚ ನ್ಯಾಯಾಲಯಕ್ಕೆ ಸಂಬಂಧಪಟ್ಟ ವಿಧೇಯಕವನ್ನು ತೆಗೆದುಕೊಳ್ಳೋಣ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಇದೊಂದು ಸಣ್ಣ ವಿಧೇಯಕ. ಕರ್ನಾಟಕ ಉಚ್ಚ ನ್ಯಾಯಾಲಯ ವಿಧೇಯಕವನ್ನು ತೆಗೆದುಕೊಳ್ಳೋಣ.

1) 1993ರ ಕರ್ನಾಟಕ ಉಚ್ಚ ನ್ಯಾಯಾಲಯ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ ಮತ್ತು ಸಂಸದೀಯ ವ್ಯವಹಾರಗಳ ಕಾನೂನು ಸಚಿವರು): ಮಾನ್ಯ ಅಧ್ಯಕ್ಷರೆ,

"1993ರ ಕರ್ನಾಟಕ ಉಚ್ಚ ನ್ಯಾಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ"

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನ್ಯಾಯಾಸ್ಥಾನಗಳಲ್ಲಿ ನಡೆಯುತ್ತಿರುವ ಮೊಕದ್ದಮೆಗಳನ್ನು ತೀವ್ರವಾಗಿ, ವೇಗವಾಗಿ ತೀರ್ಮಾನ ಮಾಡಬೇಕೆಂಬ ಉದ್ದೇಶದಿಂದ ಈಗಿರತಕ್ಕ ಅನೇಕ ಸ್ಥರಗಳನ್ನು ಕಡಿಮೆ ಮಾಡಿ ಒಂದೇ ಅಪೀಲನ್ನು ಒದಗಿಸಬೇಕೆಂದು ಹೈಕೋರ್ಟ್ನಿಂದ ಸಲಹೆ ಬಂದಿದೆ. ಇದಕ್ಕೆ ಮುಂಚೆ ಅನೇಕ ನಿಗಮಗಳು ಮತ್ತು ಲಾ ಕಮಿಷನ್ ವರದಿಯ ಪ್ರಕಾರ ಆದಷ್ಟು ಬೇಗ ಮತ್ತು ಒಂದೇ ಸ್ಥರದಲ್ಲಿ ತೀರ್ಮಾನ ಆಗುವಂತೆ ಮಾಡಬೇಕೆಂದು ಸಲಹೆಗಳನ್ನು ಕೊಟ್ಟರು. ಆ ಪ್ರಕಾರ ಈ ವಿಧೇಯಕವನ್ನು ತಯಾರು ಮಾಡಿದೆ. ಇದರ ಮುಖ್ಯ ಉದ್ದೇಶ ಕೋರ್ಟುಗಳಿಗೆ ಬಂದಂಥ ಮೊಕದ್ದಮೆಗಳು ಬೇಗ ತೀರ್ಮಾನವಾಗಲಿ ಎಂದು. ಮೊದಲ ಭಾಗ ಏನಿದೆ ಎಂದರೆ 3 ಲಕ್ಷಕ್ಕೂ ಹೆಚ್ಚು ಬೆಲೆ ಇರತಕ್ಕ ಒಂದು ವಿವಾದ ಹೈಕೋರ್ಟಿಗೆ ಬಂದರೆ ಇಬ್ಬರು ನ್ಯಾಯಾಧೀಶರು ಕುಳಿತುಕೊಂಡು ಒಮ್ಮೆಗೆ ತೀರ್ಮಾನ ಮಾಡಬೇಕೆಂದು ಹೇಳಿದ್ದೇವೆ. ಕ್ರಿಮಿನಲ್ ಮೊಕದ್ದಮೆಯಲ್ಲಿ ಮರಣ ದಂಡನೆ ಶಿಕ್ಷೆಯಾಗಿದ್ದರೆ ಅಥವಾ ಮರಣ ದಂಡನೆ ಶಿಕ್ಷೆ ಕೊಡುವಂಥ ಮೊಕದ್ದಮೆ ಇದ್ದರೆ ಅದನ್ನು ಕೂಡ ಹೈಕೋರ್ಟಿನವರು ಒಮ್ಮೆಗೇ ಇಬ್ಬರು ನ್ಯಾಯಾಧೀಶರು ಕುಳಿತುಕೊಂಡು ತೀರ್ಮಾನ ಮಾಡಬೇಕೆಂದು ಇದೆ. ಇದೆಲ್ಲಾ ಪ್ರೊಸೀಜರಲ್ ಮ್ಯಾಟರ್ಸ್. ಬೇರೆ ಬೇರೆ ರಾಜ್ಯಗಳ ಹೈಕೋರ್ಟ್ಗಳಲ್ಲಿ ಮತ್ತು ಸುಪ್ರೀಂ ಕೋರ್ಟಿನಲ್ಲಿ ಇದನ್ನು ಒಪ್ಪಿದ್ದಾರೆ. ಇದಕ್ಕೆ ಈ ಸಭೆ ಒಪ್ಪಿಗೆ ಕೊಡಬೇಕೆಂದು ವಿನಂತಿಸುತ್ತೇನೆ.